# ಶಿರಸಿಯ ಸಿರಿ ಮಾರಿಕಾಂಬೆ

ಮಲೆನಾಡಿನ ಮುಕುಟಮಣಿ ನಮ್ಮ ಶಿರಸಿ.ಉತ್ತರ ಕನ್ನಡ ಜಿಲ್ಲೆಯ 12 ತಾಲೂಕುಗಳಲ್ಲಿ ಒಂದು. ಗುಡ್ಡದ ಮೇಲೆ ನೆಲೆಸಿರುವ, ಜಿಲ್ಲೆಯಲ್ಲಿ ಶಿರದ ಸ್ಥಾನದಲ್ಲಿರುವದರಿಂದ ಶಿರಸಿ ಎಂದು ಈ ಭಾಗಕ್ಕೆ ಹೆಸರು. ರುದ್ರರಮಣೀಯ ಪ್ರಕೃತಿ ಸೌಂದರ್ಯ, ದಟ್ಟ ಕಾಡು, ಉಂಚಳ್ಳಿ,ಶಿವಗಂಗೆಯಂತಹ ಜಲಪಾತ,ಪ್ರಥಮ ಕನ್ನಡದ ರಾಜವಂಶ ಕದಂಬರ ರಾಜಧಾನಿ ಬನವಾಸಿ, ಇತಿಹಾಸ ಪ್ರಸಿದ್ಧ, ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿದ ಉಲ್ಲಾಳದ ರಾಣಿ ಅಬ್ಬಕ್ಕ ದೇವಿಯ ತವರು ಸೋದೆ, ಹೀಗೆ ಹತ್ತು ಹಲವಾರು ಪ್ರಸಿದ್ಧ, ಪ್ರೇಕ್ಷಣೀಯ ಸ್ಥಳಗಳು, ನೈಸರ್ಗಿಕ ಸೌಂದರ್ಯ ಶಿರಸಿಯಲ್ಲಿದೆ. ಬಹು ಮುಖ್ಯವಾಗಿ ನಗರದ ಹೃದಯ ಭಾಗದಲ್ಲಿ ನೆಲೆಸಿರುವಂತಹ, ಕರ್ನಾಟಕದ ಪ್ರಚಂಡ ಶಕ್ತಿಪೀಠಗಳಲ್ಲಿ ಒಂದಾದಂತಹ ಶ್ರೀ ಮಾರಿಕಾಂಬಾ ದೇವಿಯ ದೇವಸ್ಥಾನವು ಕೂಡ ಶಿರಸಿ ಶಹರದಲ್ಲಿದೆ. ಮಲೆನಾಡ ಗುಡ್ಡಗಾಡಿನ ತಾಲೂಕು ಆದಂತಹ ಶಿರಸಿಯ ಅಧಿದೇವತೆ ಮಾರಿಕಾಂಬೆ. ಶಿರಸಿ ಹಾಗೂ ಸುತ್ತಲಿನ ಜನರಿಗೆ ಮಾರಿಗುಡಿ,ಮಾರಿಯಮ್ಮನೆಂದರೆ ಅಪರಿಮಿತ ಭಕ್ತಿ, ಎಲ್ಲಿಲ್ಲದ ಶ್ರದ್ಧೆ. ಏನಾದರೂ ಚೂರು ಕಷ್ಟ ಬಂದರೂ ಅಮ್ಮನಿಗೆ ಉಡಿ ತುಂಬುತ್ತೇನೆ ಎಂದು ಹರಸಿಕೊಂಡರೆ ಸಾಕು, ಕಷ್ಟ ಕರ್ಪೂರದಂತೆ ಕರಗಿ ಮಾಯವಾಗುವುದು. ಶಿರಸಿಯ ಸಿರಿದೇವಿ ಆದಂತಹ ಮಾರಿಕಾಂಬೆಯ ಬಗ್ಗೆ, ಮಾರಿಕಾಂಬೆಯ ಜಾತ್ರೆಯ ಬಗ್ಗೆ ಒಂದಿಷ್ಟು ಮಾಹಿತಿಯನ್ನು ತಿಳಿಯೋಣ.

## ದೇವಾಲಯ

ಶಿರಸಿ ನಗರದ ಮಧ್ಯ ಭಾಗದಲ್ಲಿ ವಿಶಿಷ್ಟ ಶೈಲಿ ಆದಂತಹ ಕಾವಿ ಕಲೆಯಲ್ಲಿ ನಿರ್ಮಿಸಿದಂತಹ ದೇವಾಲಯ ಇದು. 7 ಅಡಿ ಕೆಂಬಣ್ಣದ ಮಾರಿದೇವಿಯ ಅವತಾರದಲ್ಲಿ ಆದಿಶಕ್ತಿ ದುರ್ಗೆ ಈ ದೇವಾಲಯದಲ್ಲಿ ನೆಲೆಸಿದ್ದಾಳೆ. ಜಿಲ್ಲೆಯ ಎತ್ತರದ ಭಾಗದಲ್ಲಿ ನೆಲೆನಿಂತು ಭಕ್ತರ ಕಷ್ಟ ಕಾರ್ಪಣ್ಯಗಳನ್ನು ದೂರಿಕರಿಸಿ, ಅಡಿಕೆ,ತೆಂಗು,ಯಾಲಕ್ಕಿ , ಕಬ್ಬು, ಭತ್ತ ಇತ್ಯಾದಿ ಬೆಳೆಗಳನ್ನು ಸುಭಿಕ್ಷವಾಗಿ ಬೆಳೆಯುವಂತೆ, ದುಷ್ಟ ಶಕ್ತಿಗಳು ಕಾಡದಂತೆ ಅಮ್ಮ ಮಾರಿಕಾಂಬೆ ಸ್ಫುರದ್ರೂಪಿಣಿಯಾಗಿ ಕಾವಲಾಗಿದ್ದಾಳೆ. ಶಿರಸಿಯ ಮಾರಿಕಾಂಬೆ ಕರ್ನಾಟಕದ ಎಲ್ಲಾ ಮಾರಿಯಮ್ಮರಿಗೆ ಹಿರಿಯಕ್ಕನೆಂಬ ಪ್ರತೀತಿ. ಅಂತೆಯೇ ಕೊಲ್ಲೂರಿನ ಮೂಕಾಂಬಿಕೆ,ಮೈಸೂರಿನ ಚಾಮುಂಡೇಶ್ವರಿಗೂ ಶಿರಸಿಯ ಮಾರಿಯಮ್ಮ ಹಿರಿಯಕ್ಕ. ಶಿರಸಿಯ ಶಕ್ತಿ ಪೀಠದಲ್ಲಿ ವಿರಾಜಮಾನಗಳಾಗಿ ಊರು ಕಾಯುತ್ತಾ, ಭಕ್ತರ ತನುಮನ ತಣಿಸುವ ಮಾರಿಕಾಂಬೆಯ ವಿಗ್ರಹ 7 ಅಡಿ ಎತ್ತರ ಇದೆ. ನವರತ್ನ ಖಚಿತ ಸ್ವರ್ಣ ಕಿರೀಟಗಳು,ಬೆಳ್ಳಿ ಪ್ರಭಾವಳಿಗಳು ವಿಗ್ರಹದಲ್ಲಿದೆ.ಹೇಗೆ ಮಾತೆಗೆ ಎಂಟು ಕೈಗಳಿದೆ,ಒಂದೊಂದು ಕೈಯಲ್ಲಿ ವಿಶಿಷ್ಟವಾದಂತಹ ಆಯುಧವಿದೆ. ಸಿಂಹ ವಾಹಿನಿ, ಮಹಿಷಮರ್ದಿನಿ ಕೆಂಬಣ್ಣದ ಮುಖದ ಅರಳಿದ ಕಂಗಳ ತಾಯಿ ಮಹಾ ಮಾರಿಕಾಂಬೆಯನ್ನು ನೋಡಲು ಭಕ್ತರ ಎರಡು ಕಣ್ಣು ಸಾಲದು. ಪ್ರತಿದಿನ ಇಲ್ಲಿಗೆ ನೂರಾರು ಭಕ್ತರು ಆಗಮಿಸಿ ಮಾತೆಯನ್ನು ಕಂಡು, ಚರಣಗಳಿಗೆ ವಂದಿಸಿ, ಆಶೀರ್ವಾದ ಪಡೆದು ಪುನೀತರಾಗುತ್ತಾರೆ.

ಶಿರಸಿಯ ಮಾರಿಕಾಂಬೆಯ ಬಗ್ಗೆ ಹಲವಾರು ಜನಪದ ಹಾಡುಗಳಿವೆ.

ಮಾರಿಕಾಂಬೆಯೇ ಶಿರಸಿ ಮಾತೆಯೇ

ದೂರಿಕೊಂಬೆವು ನಿನ್ನೊಳು

ಘೋರ ದುರಿತದಿ ತೊಳಲುತಿರುವೆವು

ತೋರು ಕರುಣೆಯ ನಮ್ಮೊಳು

ಹೀಗೆ ತಾಯಿಯ ಕುರಿತು ಹತ್ತು ಹಲವಾರು ಜನಪದ ಹಾಡುಗಳು ಜನರ ಬಾಯಿಂದ ಬಾಯಿಗೆ ಬಳುವಳಿಯಂತೆ ಬಂದಿದೆ.

ಪ್ರಾರಂಭದಲ್ಲಿ ಪ್ರತಿಷ್ಠೆ ಮಾಡಿದಾಗ ದೇವಿಗೆ ದೇವಸ್ಥಾನವೆಂದು ಸಣ್ಣ ಗುಡಿಸಲಿತ್ತು. ನಂತರ ವರ್ಷದಿಂದ ವರ್ಷಕ್ಕೆ ತಾಯಿಯ ಮಹಿಮೆ ಪಸರಿಸಿದಂತೆ ಭಕ್ತರ ದಂಡು ಹೆಚ್ಚಾಗಿತ್ತು. ಅಂತೆಯೇ ದೇವಾಲಯದ ವಿಸ್ತೀರ್ಣ ಕೂಡ ಹೆಚ್ಚಾಗುತ್ತಿತ್ತು. ಪ್ರಸ್ತುತ ಮಾರಿಕಾಂಬ ದೇವಾಲಯದ ಮುಂಭಾಗದಲ್ಲಿ ಎರಡು ಆನೆಗಳು ದೇವಾಲಯಕ್ಕೆ ನಮ್ಮನ್ನು ಸ್ವಾಗತಿಸುತ್ತವೆ. ದೇವಾಲಯದ ಮುಂಭಾಗದಲ್ಲಿ ಗಣಪತಿ,ತ್ರಯಂಬಕೇಶ್ವ,ಮಾರುತಿ ದೇವಾಲಯವಿದೆ. ದೇವಾಲಯದ ಪ್ರಾಂಗಣದಲ್ಲೇ ಮಾತಂಗಿ ಮತ್ತು ಭೂತರಾಜ ಸನ್ನಿಧಾನವಿದೆ. ಹೀಗೆ ದೇವಾಲಯದ ಒಳಾಂಗಣಕ್ಕೆ ಹೆಜ್ಜೆ ಇಟ್ಟರೆ, ಮೆಟ್ಟಿಲಿಂದಲೇ ದೂರದಲ್ಲಿರುವ ದೇವಿಯ ದರ್ಶನ ವಾಗುವುದು. ಮೆಟ್ಟಿಲು ಹತ್ತಿ ನಡೆದರೆ ಮೊದಲು ಸಿಗುವುದು ಸಭಾಭವನ. ಸಭಾಭವನದ ಗೋಡೆಗಳಲ್ಲಿ ನವಶಕ್ತಿಯರ ಚಿತ್ರಗಳು ಕಣ್ಣಿಗೆ ಮನಸ್ಸು ಸಂಪನ್ನಗೊಳ್ಳುತ್ತದೆ. ಹೀಗೆ ಒಳಗೆ ನಡೆದರೆ ಗರ್ಭಗುಡಿ. ಗರ್ಭಗುಡಿಯಲ್ಲಿ ಮಾತೃರೂಪಿ ಮಾರಿಕಾಂಬೆ ದರ್ಶನ ನೀಡಿ, ಬರುವ ಭಕ್ತರನ್ನು ಪುಣ್ಯ ಪುನೀತರನ್ನಾಗಿಸುತ್ತಾಳೆ. ಲೋಕದ ಸಮಸ್ತ ಭವ ಬಂಧನಗಳ ನಾಶಗೊಳಿಸುವ ತಾಯಿಗೆ ಇಲ್ಲಿ ನಿತ್ಯ ಪೂಜೆ, ಮಂಗಳಾರತಿ, ಕುಂಕುಮಾರ್ಚನೆ, ಉಡಿಸೇವೆ, ತುಲಾಭಾರ ನಡೆಯುತ್ತದೆ. ಗೋಪುರದ ಕಳಶ ಗೋಡೆಯ ಕಲೆಯನ್ನೆಲ್ಲ ನೋಡುತ್ತಿದ್ದರೆ ಹೊರಗಿನ ಪ್ರಪಂಚವನ್ನು ಭಕ್ತರು ಮರೆತೇಬಿಡುತ್ತಾರೆ.ಮಾರಿ ದೇವಿಯ ಪತಿಯ ಸಂಕೇತವಾಗಿ ದೇವಸ್ಥಾನದ ಪ್ರಾಂಗಣದಲ್ಲಿ ಕೋಣವಿದೆ. ದೇವಾಲಯದಲ್ಲಿ ಮಧ್ಯಾಹ್ನ ಅನ್ನಸಂತರ್ಪಣೆ ಇದೆ. ಮಾರಿಗುಡಿಯ ಮಧ್ಯಾಹ್ನದ ಊಟದ ರುಚಿ ಬಲ್ಲ ಭಕ್ತರಿಗೇ ಗೊತ್ತು.

## ಇತಿಹಾಸ

ಮಾರಿಕಾಂಬೆ ಶಿರಸಿಗೆ ಬಂದು ನೆಲೆಸಿದ್ದು ಹೇಗೆ ಎಂದು ಜಾಡು ಹಿಡಿದು ಹೋದರೆ ಹಲವಾರು ತರಹದ ಜನಪದ ಕಥೆ ಸಿಗುತ್ತದೆ. ಒಂದರಂತೆ ಮಹಾಭಾರತದಲ್ಲಿ ಬರುವಂತಹ ವಿರಾಟನಗರ ಎಂದರೆ ಇಂದಿನ ಹಾನಗಲ್ ಪ್ರದೇಶ. ಅಜ್ಞಾತವಾಸದಲ್ಲಿರುವಂತಹ ಪಾಂಡವರು ವಿರಾಟ ನಗರಕ್ಕೆ ಬಂದಾಗ ನಗರದ ಅಧೀದೇವತೆ ದುರ್ಗೆ ಧರ್ಮರಾಯ ಪೂಜಿಸುತ್ತಾನೆಂದು ಭಾರತದಲ್ಲಿ ಉಲ್ಲೇಖವಿದೆ.

ವಿರಾಟ ನಗರಂ ರಮ್ಯಾ ಗಚ್ಛಮಾನೋ ಯುಧಿಷ್ಠಿರಹಃ

ಅಸ್ತುವನ್ ಮನಸಾದೇವಿಂ ದುರ್ಗಿಂ ತ್ರಿಭುವನೇಶ್ವರಿಂ

ಇದರಂತೆ ಹಾನಗಲನ ತ್ರಿಭುವನೇಶ್ವರಿ ಶಕ್ತಿಪೀಠ, ಅತಿ ಪುರಾತನ ಐತಿಸ್ಯವುಳ್ಳದ್ದಾಗಿತ್ತು. ಹಲವು ವರ್ಷಗಳ ಹಿಂದೆ ಹಾನಗಲ್ ನಲ್ಲಿ ಜಾತ್ರಾ ಕೆಲಸ ಮುಗಿದ ಮೇಲೆ,ದೇವಿ ಮೂರ್ತಿ,ಒಡವೆ, ಆಭರಣವನ್ನು ಒಂದು ಪೆಟ್ಟಿಗೆಯಲ್ಲಿ ಇಡಲಾಗಿತ್ತು, ಒಡವೆಯನ್ನು ಕದ್ದ ಕಳ್ಳರು ಹಾನಗಲ್ಲಿಂದ ದೇವಿ ವಿಗ್ರಹವನ್ನು ಶಿರಸಿಯ ಕೋಟೆ ಕೆರೆಯಲ್ಲಿ ಕಳ್ಳರು ಬಿಟ್ಟುಬಿಡುತ್ತಾರೆ. ಬಸವ ಎಂಬ ಭಕ್ತ ಪ್ರತಿವರ್ಷ ಚಂದ್ರ ಗುತ್ತಿಯ ರೇಣುಕಾಂಬೆಯ ಜಾತ್ರೆಗೆ ಹೋಗುತ್ತಿರುತ್ತಾನೆ. ಆ ಒಂದು ವರ್ಷ ಊರಿನ ಜಗಳದ ಕಾರಣ ಬಸವ ಚಂದ್ರಗುತ್ತಿಗೆ ಹೋಗಲಾಗುವುದಿಲ್ಲ. ಮನ ನೊಂದ ಬಸವ ಶಿರಸಿಯಲ್ಲೇ ದೇವಿ ಪೂಜೆ ಮಾಡಿ ಮಲಗುತ್ತಾನೆ. ರಾತ್ರಿ ನಿದ್ದೆಯಲ್ಲಿ ತಾಯಿ ಬಂದು "ಬಸವ ನಾನು ಕೆರೆಯಲ್ಲಿ ಪೆಟ್ಟಿಗೆಯಲ್ಲಿ ಇದ್ದೇನೆ ಮೇಲೆತ್ತು" ಎಂದು ನುಡಿಯುತ್ತಾಳೆ. ಅದರಂತೆ ಬಸವ ಪೆಟ್ಟಿಗೆಯನ್ನು ತೆರೆದು ನೋಡಿದರೆ ಕೈಯೆತ್ತಿ ಮುಗಿಯಬೇಕೆನಿಸುವ ದೇವಿ ವಿಗ್ರಹ ಪೆಟ್ಟಿಗೆಯೊಳಗಿತ್ತು. ಹೀಗೆ ಆ ವಿಗ್ರಹ ಶಿರಸಿಯಲ್ಲಿ ಪ್ರತಿಷ್ಠಾನಗೊಂಡಿತು. ಇನ್ನೊಂದು ಕಥೆಯಂತೆ ಒಬ್ಬಳು ಸುಂದರ ಬ್ರಾಹ್ಮಣ ಯುವತಿಯನ್ನು ಮದುವೆಯಾಗಬೇಕೆಂದು ಒಬ್ಬ ಬ್ರಾಹ್ಮಣನಲ್ಲದ ಯುವಕ ವೇದಾಧ್ಯಯನ ಮಾಡಿ, ಮಂತ್ರಾಭ್ಯಾಸಗೈದು, ಮಾಂಸಾಹಾರ ತ್ಯಜಿಸಿ ಯುವತಿಯ ಮನಸ್ಸನ್ನು ಗೆದ್ದು ಮದುವೆಯಾಗುತ್ತಾನೆ. ಮಾಂಸಾಹಾರ ಸೇವಿಸಿದ್ದನ್ನು ನೋಡಿ ಯುವತಿಯ ಕೋಪ ನೆತ್ತಿಗೇರಿ ಗಂಡನ ರುಂಡ ಚೆಂಡಾಡಿ ಕೊಂದುಬಿಡುತ್ತಾಳೆ, ಕೋಪ ತಣಿಯದಿದ್ದಾಗ ಮನೆಗೂ ಬೆಂಕಿ ಇಟ್ಟು ಸುಟ್ಟುಬಿಡುತ್ತಾಳೆ. ಇದನ್ನು ನೋಡಿದ ಊರ ಜನರು ಇವಳು ದುರ್ಗೆಯ ಅವತಾರವೇ ಎಂದು ಪೂಜಿಸುತ್ತಾರೆ. ಇಂದಿನ ಕಾಲಕ್ಕೆ ಜಾತಿ ಅಸಮಾನತೆಯಂತೆ ಕಂಡರೂ ಈ ಕಥೆ ಸ್ತ್ರೀಶಕ್ತಿಯ ಸಂಕೇತವಾಗಿದೆ. ಹೀಗೆ ಗಂಡನನ್ನು ಕೊಂದು ತನ್ನನ್ನು ವಿಧವೆಯಾಗಿಸಿಕೊಂಡ ಮಾರಿಕಾಂಬೆಗೆ ಪ್ರತಿ ವರ್ಷ ಕೋಣವನ್ನು ಬಲಿ ನೀಡುವ ಪದ್ಧತಿ ಇತ್ತು. ಆ ಪದ್ಧತಿ ಪ್ರಸ್ತುತವಾಗಿ ರೂಢಿಯಲ್ಲಿಲ್ಲ. ಅದು ಹೇಗೆ ಯಾಕೆ ಎಂಬುದನ್ನು ' ಮಾರಿಜಾತ್ರೆ' ಹಂದರದಲ್ಲಿ ನೋಡೋಣ. ಮಾರಿಕಾಂಬೆಯ ದೇವಾಲಯವನ್ನು ಸೋದೆಯ ಸದಾಶಿವರಾಯರು ಮೊದಲು ಕಟ್ಟಿಸಿದರೆಂದು ತಿಳಿದು ಬರುತ್ತದೆ. ವಿಶೇಷವೆಂದರೆ ಶಿರಸಿಯ ಮಾರಿಗುಡಿ ಸ್ಮಶಾನದ ಜಾಗದಲ್ಲಿದೆ. ಸ್ಮಶಾನದ ಜಾಗದಲ್ಲಿ ನೆಲೆ ನಿಂತ ಮಾರಿ, ಭಕ್ತರ ಪೊರೆದು, ಜಾಗವ ಉದ್ದರಿಸುತ್ತಿದ್ದಾಳೆ.ಇದು ಶಿರಸಿಯ ಸಿರಿದೇವಿ ಶಿರಸಿಯ ಶಿರದಲ್ಲಿ ಬಂದು ನೆಲೆಸಿದ್ದು ಹೇಗೆ ಎಂಬ ಕಥೆಗಳು. ಈ ಮೇಲೆ ತಿಳಿಸಿದ ಎರಡು ಕಥೆಗಳು ಪುರಾವೆ ಇರುವಂತಹ ಕಥೆಗಳು ಹಾಗೂ ಪ್ರಚಲಿತವಾದ ಕಥೆಗಳು. ಹೀಗೆ ಶಿರಸಿಗೆ ಬಂದು ನೂರಾರು ವರ್ಷದಿಂದ ಭಕ್ತರಿಗೆ ದರ್ಶನ ನೀಡಿ ಶಿರಸಿ ಸೀಮೆಯನ್ನು ತಾಯಿ ಪಾವನಗೊಳಿಸುತ್ತಿದ್ದಾಳೆ.

## ಮಾರಿಜಾತ್ರೆ

ಶಿರಸಿ ಸೀಮೆಯಲ್ಲಿ ನೆಲೆ ನಿಂತ ಮಾರಿಕಾಂಬೆಗೆ ಪ್ರತಿ ಎರಡು ವರ್ಷಕ್ಕೊಮ್ಮೆ ವಿಜೃಂಬಣೆಯಿಂದ ಜಾತ್ರೆ ನಡೆಯುತ್ತದೆ. ರಾಜ್ಯ, ಅಂತರಾಜ್ಯಗಳಿಂದ ಜನರು ಕಿಕ್ಕೇರಿದು ಸೇರುತ್ತಾರೆ. ಶಿರಸಿಯ ಮಾರಿಕಾಂಬ ಜಾತ್ರೆ ದಕ್ಷಿಣ ಭಾರತದಲ್ಲಿ ಅತಿ ದೊಡ್ಡ ಜಾತ್ರೆಗಳಲ್ಲಿ ಒಂದು. ವಿಶೇಷವಾಗಿ ಉತ್ತರಕನ್ನಡ, ಹಾವೇರಿ, ಧಾರವಾಡ ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಗದಗ,ಬಳ್ಳಾರಿ ಬೆಳಗಾವಿ ಇತ್ಯಾದಿ ಜಿಲ್ಲೆಗಳಿಂದ, ಇನ್ನೂ ಗೋವಾ, ಮಹಾರಾಷ್ಟ್ರ, ಕೇರಳ, ತಮಿಳುನಾಡು,ಆಂಧ್ರಪ್ರದೇಶ ಇತ್ಯಾದಿ ರಾಜ್ಯಗಳಿಂದ ಭಕ್ತರ ದಂಡು ಶಿರಸಿ ಜಾತ್ರೆಗೆ ಹರಿದು ಬರುತ್ತದೆ. ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಎಂದರೆ ಫಾಲ್ಗುಣ ಮಾಸದ ಶುಕ್ಲ ಪಕ್ಷದಲ್ಲಿ ಒಂದು ಮಂಗಳವಾರದಿಂದ ಶಿರಸಿ ಜಾತ್ರೆ ಪ್ರಾರಂಭವಾಗುವುದು. ಜಾತ್ರೆಗೆ ಒಂದು ತಿಂಗಳು

ಪೂರ್ವವಾಗಿಯೇ ಸಿದ್ಧತೆ ನಡೆಯುತ್ತದೆ. ಜಾತ್ರೆ ಪ್ರಾರಂಭದ ಮೊದಲೇ ಜನರು ಶಿರಸಿ ಊರಿಗೆ ಬರಲು ಪ್ರಾರಂಭಿಸುತ್ತಾರೆ. ಜಾತ್ರೆಯಿಂದ ಕ್ಷಣ ನಮ್ಮ ಕಣ್ಣಿಗೆ ಬರುವಂತಹ ದೃಶ್ಯ ಲಕ್ಷಾಂತರ ಜನ, ತೊಟ್ಟಿಲು, ಅಂಗಡಿಗಳ ಸಾಲು ಹೀಗೆ ಅಕ್ಷರಶಃ ಶಿರಸಿ ಜಾತ್ರೆ ಇರುತ್ತದೆ.ಬಿಡಸಿ ನಗರ ವಂತೂ ಮಧು ವಣಗಿತ್ತಿಯಂತೆ ಸಿಂಗಾರಗೊಂಡು ಮಾರಿಕಾಂಬಾ ದೇವಿಯನ್ನು ಜಾತ್ರೆ ಗದ್ದುಗೆಯಲ್ಲಿ ಮೆರೆಸಲು ರಾಗಿ,ಜಾತ್ರೆಯಲ್ಲಿ ಬರುವ ಭಕ್ತರಿಗೆ ಸ್ವಾಗತಿಸುತ್ತದೆ. ಮಾರಿ ಜಾತ್ರೆ 9 ದಿನಗಳ ಕಾಲ ನಡೆಯುವುದು. 8 ದಿನ ಮಾರಿಕಾಂಬೆ ಗದ್ದುಗೆಯಲ್ಲಿ ಇರುತ್ತಾಳೆ.ಜಾತ್ರೆ ಒಂದು ತಿಂಗಳಿನಿಂದಲೇ ಆಡಳಿತ ಮಂಡಳಿ, ಆಡಳಿತ ಅಧಿಕಾರಿಗಳು ಜಾತ್ರೆ ಸಿದ್ಧತೆ ಮಾಡಲು, ದಿನಾಂಕಗಳನ್ನೆಲ್ಲಾ ನಿಗದಿ ಪಡಿಸಲು ಪ್ರಾರಂಭಿಸುತ್ತಾರೆ. ಜಾತ್ರೆಯ ಪೂರ್ವದಲ್ಲೇ ಒಂದಿಷ್ಟು ವಂಶಗಳು ಕೆಲವು ದಿನಗಳ ಕಾಲ ಹೊರಬೀಡು ಆಚರಣೆ ಮಾಡುತ್ತಾರೆ. ಹೊರಬೀಡು ಎನ್ನುವುದು ನಮ್ಮ ಪೂರ್ವಜರಿಂದ ಆಚರಿಸಿಕೊಂಡು ಬಂದಂತಹ ಒಂದು ವಿಶಿಷ್ಟ ಪದ್ಧತಿ. ಹೊರಬೀಡಿನಲ್ಲಿ ಕೆಲ ಕುಟುಂಬದವರು ಮನೆಯಿಂದ ಹೊರಗೆ ಅಡಿಗೆ ಮಾಡಿ ಊಟ ಮಾಡಿ ಪೂಜೆ ಮಾಡಿ ಉತ್ಸವ ಕಾರ್ಯ ನೆರವೇರಿಸುತ್ತಾರೆ. ಅನಂತರ ಒಂದು ಮಂಗಳವಾರದಿಂದ ಜಾತ್ರೆ ಪ್ರಾರಂಭ ದೇವಿಯ ಮೂಲ ವಿಗ್ರಹವನ್ನೇ ಜಾತ್ರೆಗೆ ಕೊಂಡೊಯ್ದು ಜಾತ್ರಾ ನಂತರ ಹೊಸ ವಿಗ್ರಹ ಮಾಡಿ ಪ್ರಾಣ ಪ್ರತಿಷ್ಠೆ ಮಾಡಿ ದೇವಾಲಯದಲ್ಲಿ ಇಡುವುದು ಇಲ್ಲಿನ ಪ್ರತೀತಿ.

ಜಾತ್ರೆಯ ಮೊದಲ ದಿನ ದೇವಾಲಯದಿಂದ ಹೊರಟ ದೇವಿ, ಮರ್ಕಿ ದುರ್ಗಿ ದೇವಾಲಯಕ್ಕೆ ಹೋಗಿ ತಂಗಿಯರಾದ ಮರ್ಕಿ ದುರ್ಗಿಯವರನ್ನು ಕರೆದುಕೊಂಡು ಥೇರಿನಲ್ಲಿ ನಗರದ ಮಧ್ಯದ ಬಿಡಕಿಬೈಲಿನಲ್ಲಿ ಇರುವಂತಹ ಜಾತ್ರೆಯ ಗದ್ದುಗೆಗೆ ವಿಜೃಂಭಣೆಯಿಂದ ತೆರೆಳುತ್ತಾಳೆ. ಜಾತ್ರೆಯಲ್ಲಿ ಥೇರಿ ನೊಂದಿಗೆ ಡೊಳ್ಳು ಕುಣಿತ, ವಾದ್ಯ,ಹಿಮ್ಮೇಳ, ಯಕ್ಷಗಾನ ಎಲ್ಲವೂ ಇರುತ್ತದೆ. ನೃತ್ಯಗಾರರು,ಹಾಡುಗಾರರು,ಜೋಗತಿಯರು,ಭಕ್ತವೃಂದದವರು ಎಲ್ಲರೂ ಮಾರಿ ಥೇರಿನೊಂದಿಗೆ ಸಾಗುತ್ತಾರೆ. ಎಂಟು ದಿನಗಳ ಕಾಲ ದೇವಿ ಗದ್ದುಗೆಯಲ್ಲಿ ಹಣ್ಣುಕಾಯಿ ಸೇವೆ,ಮಹಾಪೂಜೆ ಸೇವೆ ಇತ್ಯಾದಿ ಸೇವೆ,ಅರ್ಚನೆಗಳು ನಡೆಯುತ್ತವೆ.ದೂರ ದೂರದ ಊರಿನಿಂದ ಬಂದ ಜನರು ಮಹಾದೇವಿ ಆದಿಶಕ್ತಿ ಮಾರಿಕಾಂಬೆಯ ದರ್ಶನ ಪಡೆದು ಹಣ್ಣು ಕಾಯಿ ಸಮರ್ಪಿಸಿ ತಾಯಿಯ ಕೃಪೆಗೆ ಪಾತ್ರರಾಗುತ್ತಾರೆ.

ಶಿರಸಿ ಊರಿನವರಿಗಂತೂ ಜಾತ್ರೆ ವರ್ಷವೆಂದರೆ ಹಬ್ಬ. ಜಾತ್ರೆಯೇ ನಿಬ್ಬರೆಗಾಗುವ ರೀತಿಯಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ. ಒಂದು ತಿಂಗಳ ಮೊದಲೇ ಅಂಗಡಿಗಳ ಜಾಗ ಹರಾಜು ಪ್ರಾರಂಭವಾಗುತ್ತದೆ. ತಿಂಡಿ ತಿನಿಸು ಅಂಗಡಿ, ಗೊಂಬೆ ಆಟಿಕೆಗಳ ಅಂಗಡಿ,ಬಟ್ಟೆ ಅಂಗಡಿ ಹೀಗೆ ಹತ್ತು ಹಲವಾರು ರೀತಿಯ ನೂರಾರು ಅಂಗಡಿಗಳು ಜಾತ್ರೆಗೆ ಬರುತ್ತವೆ. ಶಿರಸಿ ಜಾತ್ರೆಗೆ ಸುಮಾರು 30 ಲಕ್ಷಕ್ಕೂ ಅಧಿಕ ಜನರು ಆಗಮಿಸುತ್ತಾರೆ ಹಾಗೂ ಜಾತ್ರೆಯಿಂದ 40 ಲಕ್ಷಕ್ಕೂ ಅಧಿಕ ಹಣ ಆದಾಯ ಉತ್ಪನ್ನವಾಗುತ್ತದೆ.

ಮಾರಿಜಾತ್ರೆ ಮಾರ್ಚ್ ತಿಂಗಳಿನಲ್ಲಿ ನಡೆದ ಕಾರಣ ಮಕ್ಕಳಿಗೆ ಪರೀಕ್ಷೆಗಳು ಇರುತ್ತದೆ. ಆದರೂ ಕೂಡ ಮಕ್ಕಳು ಜಾತ್ರೆ ಬಿಡುವುದಿಲ್ಲ.10,12ನೇ ತರಗತಿ ಪರೀಕ್ಷ ಇದ್ದರೂ ಮಕ್ಕಳಿಗೆ ಒಂದು ದಿನವಾದರೂ ಜಾತ್ರೆಗೆ ಹೋಗದಿದ್ದರೆ ಸಮಾಧಾನವಿರುವುದಿಲ್ಲ. ಇನ್ನೂ ಹಲವಾರು ಮಕ್ಕಳು, ಕಳಸ್ಟೆ ಅಲ್ಲ ದೊಡ್ಡ ಜನರು ಕೂಡ ಜಾತ್ರೆಗೆ ಪ್ರತಿದಿನ ಹೋಗುತ್ತಾರೆ. "ನಮ್ಮ ಊರಿನ ಜಾತ್ರೆಗೆ ಹೊರ ಊರಿನವರೇ ಬರುತ್ತಾರಂತೆ ನಾವು ಪ್ರತಿದಿನ ಹೋಗದಿದ್ದರೆ ಹೇಗೆ? " ಎಂಬ ಮಾತು ಪ್ರತಿ ಜಾತ್ರೆಯಲ್ಲಿ ಕೇಳಿ ಬರುತ್ತದೆ. ಸಂಜೆಯ ಸಮಯವಂತು ಜಾತ್ರೆ ಬೀದಿಯನ್ನು ನೋಡಬೇಕು. ಹೋಗಿ ಬೀದಿಯಲ್ಲಿ ನಿಂತರೆ ನೆರೆದ ಜನರೇ ಮುಂದೆ ಕರೆದೊಯ್ಯುತ್ತಾರೆ. ಕಿಕ್ಕಿರಿದು ಸೇರಿದ ಜನಸಮೂಹವನ್ನು ನೋಡಲು, ಸೇರಲು,ಆನಂದಿಸಲು,ಎರಡು ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯೇ ಬರಬೇಕು.

ಅಂಗಡಿಗಳ ಸಾಲು ಒಂದೆಡೆಯಾದರೆ, ಜಾತ್ರೆಯ ಮೆರಗು ಹೆಚ್ಚಿಸುವ ತೊಟ್ಟಿಲು, ಬ್ರೇಕ್ ಡ್ಯಾನ್ಸ್,ಟೋರ ಟೋರ, ಹ್ಯಾಮರ್, ಅಕ್ಟೋಪಸ್ ಇವುಗಳಲ್ಲಿ ಹತ್ತಲು ಆಟವಾಡಲು ಚಿಕ್ಕ ಮಕ್ಕಳಷ್ಟೇ ಅಲ್ಲ ದೊಡ್ಡವರು ಕೂಡ ಅತೀ

ಉತ್ಸುಕರಾಗಿರುತ್ತಾರೆ. ಇನ್ನೂ ಕತ್ತೆ ಶೋ, ನಾಯಿ ಶೋ ಇವುಗಳನ್ನೆಲ್ಲ ಜಾತ್ರೆಯಲ್ಲಿ ಅನುಭವಿಸಲೇಬೇಕು.ತಂದೆ ತಾಯಿ ಅಜ್ಜ ಅಜ್ಜಿ ಗೆಳೆಯರು ಇವರೊಂದಿಗೆ ಕಳೆದ ಜಾತ್ರೆಯ ನೆನಪು ಜೀವನದ ಅವಿಸ್ಮರಣೀಯ ಕ್ಷಣವಾಗುವುದು.

"ಜನಮರುಳು ಜಾತ್ರೆ ಮರುಳು "

ಎಂಬಂತೆ ಶಿರಸಿ ಜಾತ್ರೆಯಲ್ಲಿ ಜನ ಸಮೂಹವೇ ಸೇರುತ್ತದೆ. ಇನ್ನು ಎಂಟು ದಿನದ ಜಾತ್ರೆಯ ನಂತರ ದೇವಿ ಜಾತ್ರಾ ಗದ್ದುಗೆಯಿಂದ ಹೊರಡುತ್ತಾಳೆ. ಹೊರಡುವಾಗ ಜಾತ್ರೆಯ ಚಪ್ಪರಕ್ಕೆ ಬೆಂಕಿ ಇಡುವ ರೂಢಿ. 'ಇತಿಹಾಸ' ಹಂದರದಲ್ಲಿ ಹೇಳಿದಂತೆ ಮಾರಿ ಜಾತ್ರೆಯಲ್ಲಿ ಕೋಣನನ್ನು ಬಲಿ ನೀಡುವ ಪದ್ಧತಿ ಇತ್ತು 1934 ರಲ್ಲಿ ಮಹಾತ್ಮ ಗಾಂಧೀಜಿಯವರು ಶಿರಸಿಗೆ ಭೇಟಿ ಕೊಡುತ್ತಾರೆ. ಆಗ ಭಾರಿಕಾಂಬ ದೇವಸ್ಥಾನಕ್ಕೆ ಭೇಟಿ ಕೊಡಲು ನಿರಾಕರಿಸುತ್ತಾರೆ. ಕಾರಣವೇನೆಂದರೆ ಮಾರಿ ಜಾತ್ರೆಯಲ್ಲಿ ಕೋಣದ ಬಲಿ, ನಂತರ ಗಾಂಧೀಜಿಯವರ ಮಾತಿನಂತೆ ಅಂದಿನಿಂದ ಕೋಣದ ಬಲಿಯನು ನಿಲ್ಲಿಸಲಾಯಿತು.ನಂತರ ಜಾತ್ರಾ ಗದ್ದುಗೆಯಿಂದ ಹೊರ ಬಂದ ದೇವಿಯ ಆಭರಣವನ್ನೆಲ್ಲಾ ತೆಗೆದು ದೇವಾಲಯದ ಬಾಗಿಲು ಹಾಕಲಾಗುತ್ತದೆ. ಯುಗಾದಿಯ ತನಕ ಮಾರಿಗುಡಿಯ ದೇವಾಲಯದ ಬಾಗಿಲನ್ನು ಹಾಕಲಾಗುತ್ತದೆ. ಪೂಜೆ ಇರುವುದಿಲ್ಲ. ಮಾರಿಕಾಂಬ ದೇವಿಯ ಹೊಸ ವಿಗ್ರಹ ಮಾಡಿ ಯುಗಾದಿಗೆ ಮತ್ತೆ ಬಾಗಿಲು ತೆಗೆದು ಅಂದಿನಿಂದ ಪೂಜೆ ಮತ್ತೆ ಪೂಜೆ ಪ್ರಾರಂಭಿಸಲಾಗುತ್ತದೆ. ಹೀಗೆ ಜಾತ್ರೆಯ ಆ ಭಕ್ತ ಸಾಗರದಲ್ಲಿ ಮಿಂದೆದ್ದ ದೇವಿ, ಯುಗಾದಿಯಿಂದ ಮತ್ತೆ ದೇವಾಲಯದಲ್ಲಿ ಹೀಗೆ ಶಿರಸಿ ಜಾತ್ರೆ ನ ಮಾನಸದಲ್ಲಿ ಅಚ್ಚೊತ್ತಿ ಯಾವಾಗ ಮತ್ತೆ ಬರುವುದೆಂದು ಕಾತುರದಿಂದ ಕಾಯುವಂತೆ ಮಾಡಿದೆ.

ಶಿರಸಿಯ ಶಿಖರವೇರಿ ತ್ರಿಭುವನೇಶ್ವರಿ ದೇವಿ ಮಾರಿಕಾಂಬೆಯಾಗಿ ಜಾಗವನ್ನು ಕಾಯುತ್ತಾ ಭಕ್ತರ ಮನಸ್ಸಿನ ಇಷ್ಟಾರ್ಥದ ಕಾಮನೆಯನ್ನು ಪೂರೈಸುತ್ತ,ಸಂಪತ್ತನ್ನು ಇಮ್ಮಡಿಗೊಳಿಸುತ್ತಿದ್ದಾಳೆ. ತಾಯಿ ಮಾರಿಕಾಂಬೆ ಸರ್ವರ ಸಕಲ ದುರಿತಗಳನ್ನು ದೂರಿಕರಿಸಿ ಸರ್ವ ಲೋಕಗಳಿಗೂ ಸನ್ಮಂಗಳವನ್ನು ಉಂಟುಮಾಡಲಿ.

ಕರ್ನಾಟ ದೇಶದೊಳ್ ಕನ್ನಡ ಅಭಿಮಾನಿ ಪೂರ್ಣಚಂದ್ರ

poornachandramanjunathhegde24cs@rnsit.ac.in